O.S. 102/2016
ಪಿ ಡಬ್ಲ್ಯೂ-3

**ಸಾಕ್ಷಿಯನ್ನು ದಿನಾಂಕ 10-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ MLS ವಕೀಲರಿಂದಃ**

**1.** ವಾದಿ ನನ್ನ ಸಂಬಂಧಿಕರಲ್ಲ, ನಮ್ಮ ಜನಾಂಗಕ್ಕೆ ಸೇರದವರಾಗಿರುತ್ತಾರೆ. ಸುಮಾರು **35** ವರ್ಷಗಳಿಂದ ವಾದಿ ಮತ್ತು ಪ್ರತಿವಾದಿಗಳ ಪರಿಚಯ ನನಗೆ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯನ್ನು ನಾನು ಅಳತೆ ಮಾಡಿರುವುದಿಲ್ಲ. ಪ್ರತಿವಾದಿಯು ವಾದಿಗೆ ಸೇರಿದ **4** ಅಡಿ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಆ ರೀತಿ ಒತ್ತುವರಿ ಮಾಡಿರುವ ಬಗ್ಗೆ ವಾದಿಯು ನನಗೆ ಹೇಳಿರುತ್ತಾರೆ. ಆ ಕಾರಣ ನನಗೆ ಗೊತ್ತು. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಖಾತೆ ಸಂಖ್ಯೆ **7** ಯಾರಿಗೆ ಸಂಬಂಧಿಸಿದೆಂದು ನನಗೆ ಗೊತ್ತಿಲ್ಲ. ಖಾತೆ ಸಂಖ್ಯೆ **12** ವಾದಿಗೆ ಸೇರಿದ್ದಾಗಿರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ ನನ್ನಿಂದ ಹೇಳಲಾಗುವುದಿಲ್ಲ.

**2.** ನಾಗಪ್ಪ ಮತ್ತು ತಿಮ್ಮಯ್ಯ ಸಹೋದರರು ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಗಳ ನಡುವೆ ಹಣಕಾಸಿನ ವ್ಯವಹಾರ ಇರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ **80** ಸಾವಿರ ಸಾಲದ ಹಣ ನೀಡಬೇಕೆಂದರೆ ಸರಿಯಲ್ಲ. ಸದರಿ ಸಾಲದ ಹಣವನ್ನು ನೀಡುವಂತೆ **1** ನೇ ಪ್ರತಿವಾದಿ ನನ್ನನ್ನು ಕೇಳಿದ ಕಾರಣ ನಾನು ಅವರ ವಿರುದ್ಧ ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಹಣಕಾಸಿನ ವಿಚಾರವಾಗಿ ನನ್ನ ಮತ್ತು ಪ್ರತಿವಾದಿ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗೆ ಸೇರಿದ ಯಾವುದೇ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S. 102/2016
ಪಿ ಡಬ್ಲ್ಯೂ-3

Plaintiff No.2 is present, filed his affidavit in lieu of chief examination and examined as PW-1 got marked Ex.P. 1 to 7.

Sri. HVS prays time.

Further chief of PW 1 by: **27.04.2026**

Civil Judge and JMFC.
*Koratagere.*